ಹೌದು. ನಮ್ಮ ಸಂಸ್ಥೆ ಹೆಸರಿಗೆ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಾಜಿ. ಹತ್ತು ವರ್ಷಗಳ ಹಿಂದೆ ಇಲ್ಲಿ ಮಾತ್ರವಲ್ಲ, ಯುರೋಪ್‌ನ ವಿಶ್ವವಿದ್ಯಾಲಯಗಳಲ್ಲಿ ಹೊಸ ರೀತಿಯ ವೃತ್ತಿಗಳನ್ನು ಸೃಷ್ಟಿಸಬೇಕಾಯಿತು. ನಾವು ಚೀನಾಲಜಿ, ಜಪಾನಾಲಾಜಿ, ಇಂಡಾಲಜಿ ವಿಭಾಗಗಳು ಸೇರಿ ಡಿಪಾರ್ಟ್‌ಮೆಂಟ್ ಆಫ್ ಸೌತ್ ಏಶಿಯನ್ ಸ್ಟಡಿಸ್ ಆಗಿದ್ದೀವಿ. ನಮ್ಮ ಸಂಸ್ಥೆಯಲ್ಲಿ ಆಕರ್ಷಕ ಕೋರ್ಸು ಅಂದರೆ ಬುದ್ಧಿಸ್ಟ್ ಅಂಡ್ ಸೌಂತ್ ಏಶಿಯನ್ ಸ್ಟಡೀಸ್. ಹೆಚ್ಚಿನ ವಿದ್ಯಾರ್ಥಿಗಳು ಬೌದ್ಧ ಧರ್ಮದ ಆಸಕ್ತಿಯಿಂದ ಬಂದಿದ್ದಾರೆ. ಟಿಬೆಟಾಲಾಜಿ ಅಂದರೆ ಬೌದ್ಧ ಅಧ್ಯಯನ. ಬೌದ್ಧಧರ್ಮ ಒಂದು ರೀತಿಯ ಫ್ಯಾಶನ್ ಆಗಿದೆ. ಏಕೆಂದರೆ, ನಾವು ನಿಜವಾಗಿಯೂ ಧಾರ್ಮಿಕ ಜನರು ಆಗಿದ್ದರೆ ಯಾಕೆ ಇಂತಹ ಯುದ್ಧಗಳನ್ನು ಮಾಡಿದೀವಿ? ಕ್ರೈಸ್ತ ಸಾಂಸ್ಕೃತಿಕ ಪರಿಸರದಲ್ಲಿ ಹೇಗೆ ಇಂಥ ಅಪರಾಧಗಳು ನಡೆದವು? ಈ ಹಿಟ್ಲರ್ ಕಾಲ ಹೇಗೆ ಸಾಧ್ಯವಾಯಿತು? ನಮ್ಮ ಧರ್ಮ ಇದರ ವಿರುದ್ಧವಾಗಿ ಏನು ಮಾಡಿತು? ಇಂಥ ಪ್ರಶ್ನೆಗಳು ಹುಟ್ಟಿ ಕ್ರೈಸ್ತ ಧರ್ಮದ ಬಗ್ಗೆ ಹೆಚ್ಚಿನ ಜನರಿಗೆ ವಿಶ್ವಾಸ ಕಳೆದುಹೋಗಿದೆ. ಅವರ ಸಾಂಪ್ರದಾಯಿಕ ಧಾರ್ಮಿಕತೆ–ಆಧ್ಯಾತ್ಮಿಕತೆ ಭಗ್ನವಾಗಿದೆ. ಕ್ರೈಸ್ತಧರ್ಮ ಕರಗಿ ಹೋಗಿದೆ. ಆ ಶೂನ್ಯದಲ್ಲಿ ಹೊಸದು ಬರಬೇಕು. ಅವರು ಪರ್ಯಾಯ ಹುಡುಕುತ್ತಿದ್ದಾರೆ. ಕೆಲವು ಜನರು ಮುಸ್ಲಿಂ ಆಗುತ್ತಾರೆ ಅಥವಾ ಹರಿಕೃಷ್ಣ ಪಂಥಿ ಆಗುತ್ತಾರೆ. ಇದರಲ್ಲಿ ದೊಡ್ಡ ಸಕ್ಸೆಸ್ ಬೌದ್ಧ. 40 ವರ್ಷಗಳ ಹಿಂದೆ ಎಲ್ಲರೂ ಝೆನ್ ಕುರಿತು ಓದಿದರು. ಇತ್ತೀಚೆಗೆ ಅದು ಟಿಬೆಟಿಯನ್ ಬುದ್ಧಿಸಂ ಆಗಿದೆ. ಅವರಿಗೆ ದಲೈಲಾಮಾ ಕಲ್ಚರಲ್ ಹೀರೊ. ನಾನು ಹಿಂದೆ ಸೀರಿಯಸ್ಸಾಗಿ ಸಂಸ್ಕೃತ ಕಲಿತ ಹಾಗೆ ಈ ಪೀಳಿಗೆಯ ಜನ ಟಿಬೆಟಿಯನ್ ಕಲೀತಾರೆ. ಮೆಚ್ಚಬೇಕು. ಏನೋ ಹುಡುಕುತ್ತಾರೆ – ಟಿಬೆಟ್‌ನಲ್ಲಿ ಸಿಗಬಹುದು ನೋಡೋಣ ಅಂತ.

◆ ಮಿಶನರಿಗಳ ಚರಿತ್ರೆಯನ್ನು ಪಾಠಮಾಡುವಾಗ ಇಂಡಾಲಜಿಯ ವಿದ್ಯಾರ್ಥಿಗಳು ಯಾವ ರೀತಿ ಪ್ರತಿಕ್ರಿಯಿಸ್ತಾರೆ?

ಮತ ಪ್ರಚಾರಕರು ಇದ್ದರು ಎಂದು ಹೇಳಿದರೆ ನಗುತ್ತಾರೆ; 'ಹ್ವಾ ಏನು? ಮಿಶನರೀಸ್ ಇಂಡಿಯಾಕ್ಕೆ ಹೋಗಿ ಇಂಥ ಕೆಲಸಗಳನ್ನು ಮಾಡಿದರಾ?' ಎಂದು ಆಶ್ಚರ್ಯ ಪಡುತ್ತಾರೆ. ಅವರಿಗೆ ಇದು ಬೇರೆ ಪ್ರಪಂಚ. ಯುರೋಪಿಯನ್ಸ್ ಉಳಿದ ಪ್ರಪಂಚವನ್ನು ಹೇಗೆ ಕಾಣುತ್ತಾರೆ ಎಂಬುದರಲ್ಲಿ ತುಂಬಾ ಬದಲಾವಣೆ ಆಗಿದೆ. ಇಂಡಿಯಾದ ಸಂಪ್ರದಾಯವಾದಿಗಳಿಗೆ ಇದೆಲ್ಲ ಗೊತ್ತಿಲ್ಲ. ಅವರ ಆಲೋಚನೆ ಇನ್ನೂ ವಸಾಹತುಶಾಹಿ ಕಾಲದಲ್ಲಿದೆ.

◆ ಭಾರತಶಾಸ್ತ್ರಜ್ಞರಾಗಿ ಭಾರತದಲ್ಲಿ ಉಪನ್ಯಾಸ ಮಾಡುವಾಗ ಎಂತಹ ಅನುಭವಗಳಾಗಿವೆ?

ಕೆಲವೊಮ್ಮೆ ಬರೀ ಅನುಮಾನದ ಪ್ರಶ್ನೆ ಬರುತ್ತವೆ. ಯಾಕೆ ನೀವು ಕೆಂಪುಜನ ಇಲ್ಲಿಗೆ ಬರುತ್ತೀರಿ? ನಮ್ಮ ಸಂಸ್ಕೃತಿ ಹಾಳು ಮಾಡುತ್ತೀರಿ? ಅವರ ಆಕ್ಷೇಪ ಸರಿ. ಯುರೋಪ್‌ನಲ್ಲಿ, ಅಮೆರಿಕದಲ್ಲಿ ಕೆಲವು ಜನ ಸಂಶೋಧಕರು ಎಂದುಕೊಳ್ಳುವರು ಇದ್ದಾರೆ. ಅವರು ಇಂಡಿಯಾದ ಪೌರಾಣಿಕ, ಧಾರ್ಮಿಕ ಜೀವನದ ಬಗ್ಗೆ ಏನೇನೊ ಕಲ್ಪಿಸಿಕೊಂಡು ಪುಸ್ತಕ ಬರೆದು ಪ್ರಕಟಿಸಿದ್ದಾರೆ. ಗಣಪತಿಯ ಬಗ್ಗೆ, ರಾಮಕೃಷ್ಣ ಪರಮಹಂಸರ ಬಗ್ಗೆ ಕೆಟ್ಟದಾಗಿ ಬರೆದಿದ್ದಾರೆ. ಅದು ಅಕಡಮಿಕ್ ಸಂಶೋಧನೆಯಲ್ಲ. ಅದರಲ್ಲಿ ತುಂಬಾ ಅಸಹ್ಯ ಇದೆ. ತಕ್ಷಣ ಒಪ್ಪುತ್ತೇನೆ.

◆ ನಮ್ಮ ಗ್ರಾಮದೇವತೆಗಳ ಬಗ್ಗೆ ಕ್ರಿಮಿನಲ್ ಗಾಡ್ಸ್ ಅಂತ ಹೆಸರಿಟ್ಟು ಕೆಲವರು ಪುಸ್ತಕ ಬರೆದಿರುವುದುಂಟು.